ಹುಕ್ಕೇರಿ ತಾಲ್ಲೂಕಿನ ಶಿಪ್ಪೂರ–ಮಂಡಲಗಾ ರಸ್ತೆ ನಿರ್ಮಾಣ ಕಾರ್ಯದ ಬಗ್ಗೆ

೧೬. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) — ಮಾನ್ಯ ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;

ಅ) ಹುಕ್ಕೇರಿ ತಾಲ್ಲೂಕಿನ ಶಿಪ್ಪೂರ–ಮಂಡಲಗಾ ರಸ್ತೆಯ ನಿರ್ಮಾಣಕ್ಕೆ ಎಷ್ಟು ಹಣ ಮಂಜೂರಾಗಿದೆ ;

ಆ) ಸೇತುವೆಗಳ ನಿರ್ಮಾಣವಿಲ್ಲದೇ ಈ ಭಾಗದ ಜನರಿಗೆ ತೊಂದರೆಯಾಗಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ಸೇತುವೆಗೆ ತಗಲುವ ಖರ್ಚು ಎಷ್ಟು ;

ಈ) ಇದನ್ನು ಎಷ್ಟು ದಿವಸದಲ್ಲಿ ಪೂರ್ತಿಗೊಳಿಸಲಾಗುವುದು ;

ಉ) ಈ ರಸ್ತೆಯ ಮೇಲೆ ಎಷ್ಟು ವಾಹನಗಳು ಸಂಚರಿಸುತ್ತಿವೆ ಎಂಬ ಬಗ್ಗೆ ಮಾಹಿತಿಯನ್ನು ಒದಗಿಸುವುದು ;

ಊ) ಶಿಪ್ಪೂರ–ಮಂಡಲಗಾ ರಸ್ತೆಗೆ ಮಂಜೂರಾದ ಹಣದ ಉಳಿತಾಯದಲ್ಲಿ ಹಡಲಗಾ ಗ್ರಾಮಕ್ಕೆ ಇರುವ ರಸ್ತೆಯ ಕೆಲಸವನ್ನು ಪ್ರಾರಂಭಿಸಲು ಇಲಾಖೆಯವರು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಶಿಪ್ಪೂರಿ–ಮಂಡಲಗಾ ರಸ್ತೆ ನಿರ್ಮಾಣಕ್ಕೆ ೫ (ಐದು) ಲಕ್ಷ ರೂಪಾಯಿಗಳು ಮಂಜೂರಾಗಿದೆ

ಆ) ಸರಕಾರದ ಗಮನಕ್ಕೆ ಬಂದಿದೆ.

ಇ) ಎರಡೂ ರಸ್ತೆಗಳನ್ನು ನಿರ್ಮಿಸಬೇಕಾಗಿದ್ದು ಸುಮಾರು ಎರಡೂ ಲಕ್ಷ ರೂಪಾಯಿಗಳು ಬೇಕಾಗಬಹುದು.

ಈ) ಆದಷ್ಟು ಜಾಗ್ರತೆ ಕೆಲಸ ಪ್ರಾರಂಭ ಮಾಡಿ ಮುಗಿಸಲಾಗುವುದು.

ಉ) ಸರಾಸರಿ ದಿನಕ್ಕೆ ೧೯೦ ಯಾಂತ್ರಿಕ ವಾಹನಗಳು ೬೧ ಎತ್ತಿನ ಗಾಡಿಗಳು ಸಂಚರಿಸುತ್ತವೆ.

ಊ) ಶಿಪ್ಪೂರ–ಮಂಡಲಗಾ ಕೆಲಸವು ಇನ್ನು ಪೂರ್ತಿಯಾಗದಿರುವುದರಿಂದ ಉಳಿತಾಯದ ಪ್ರಶ್ನೆ ಈಗಲೇ ಉದ್ಭವಿಸುವುದಿಲ್ಲ.

ಹುಕ್ಕೇರಿ ತಾಲ್ಲೂಕಿನ ದಡ್ಡಿ–ಕೊಟ್ಟ ರಸ್ತೆಯಲ್ಲಿ ಮೇಲೆ ಕಟ್ಟಬೇಕಾದ ಸೇತುವೆ ಬಗ್ಗೆ

೧೭. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ). — ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;—

ಅ) ಹುಕ್ಕೇರಿ ತಾಲ್ಲೂಕಿನಲ್ಲಿಯ ದಡ್ಡಿ–ಕೊಟ್ಟ ರಸ್ತೆಯ ಮೇಲೆ ೧೨ ತಿಂಗಳು ರಹದಾರಿಗಾಗಿ ಎಷ್ಟು ಸೇತುವೆಗಳನ್ನು ನಿರ್ಮಾಣ ಮಾಡಬೇಕಾಗಿದೆ ;

ಆ) ದೊಂಡ ಗಟ್ಟಿಯಿಂದ ಅಲದಾಳ ಗ್ರಾಮದವರಿಗೆ ಇರುವ ರಸ್ತೆಯ ಮೇಲೆ ಎಷ್ಟು ಸೇತುವೆಗಳ ಕೆಲಸ ಮಂಜೂರು ಆಗಿವೆ ?

ಇ) ದಡ್ಡಿ, ಶೆಟ್ಟಿಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಮೇಲೆ ಇನ್ನೂ ಎಷ್ಟು ಸೇತುವೆಗಳ ಕೆಲಸವನ್ನು ಮುಗಿಸಬೇಕಾಗಿದೆ ಅದನ್ನು ಈ ವರ್ಷದ ಬಜೆಟ್ಟಿನಲ್ಲಿ ಅಳವಡಿಸಲಿಕ್ಕೆ ಸರಕಾರ ಕ್ರಮ ತೆಗೆದುಕೊಂಡಿದೆಯೇ ;

ಈ) ಈ ಎಲ್ಲಾ ಕೆಲಸಗಳಿಗೆ ಎಷ್ಟು ಹಣ ಬೇಕಾಗುವುದು ?